★★★

ಕಳೆದ ಸಲ ಹಳ್ಳಿಗೆ ಹೋಗಿದ್ದಾಗ ಅಮ್ಮನಿಗೆ ಮೊಬೈಲ್ ಕೊಡಿಸಿದ್ದ. ಫೋನ್ ಮಾಡೋದು ಹೇಗೆ, ಫೋನ್ ಬಂದಾಗ ರಿಸೀವ್ ಮಾಡೋದು ಹೇಗೆ ಅನ್ನೋದನ್ನು ಹೇಳಿಕೊಟ್ಟಿದ್ದ. ಅವನಿಗೆ ಹತ್ತು ವರ್ಷವಾಗಿದ್ದಾಗ ಅಪ್ಪನನ್ನು ಕಳೆದುಕೊಂಡ. ಇವನ ಓದಿಗಾಗಿ ಅಮ್ಮ ಪಡಬಾರದ ಕಷ್ಟಗಳನ್ನೆಲ್ಲಾ ಪಟ್ಟಳು. ಡಿಗ್ರಿ ಮುಗಿಸಿದ. ಕ್ಯಾಂಪಸ್ ಸೆಲೆಕ್ಷನ್ನಲ್ಲೇ ಎಂಎನ್‌ಸಿ ಕಂಪನಿಯೊಂದರಲ್ಲಿ ಒಳ್ಳೆಯ ಕೆಲಸ ಗಿಟ್ಟಿಸಿದ. ಬೆಂಗಳೂರಿಗೆ ಬಂದ. ಒಂದು ಮನೆಯನ್ನು ಮಾಡಿದ. ಅಮ್ಮನನ್ನೂ ಕರೆದ. ಅಮ್ಮ ಒಪ್ಪಲಿಲ್ಲ. ಶಶಿಯ ಶ್ರೇಯಸ್ಸಿಗಾಗಿ ತನ್ನೆಲ್ಲ ಸುಖವನ್ನೂ ತ್ಯಾಗ ಮಾಡಿದ್ದ ಅಮ್ಮನನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ– ಮದುವೆಯಾಗುವವರೆಗೂ. ಬಂದ ಹೆಂಡತಿಗೆ ಶಶಿಯ ಅಮ್ಮ ಕಸಕ್ಕಿಂತ ಕಡೆಯಾದಳು. ಅಮ್ಮನನ್ನು ಮನೆಗೆ ಕರೆಯುವುದನ್ನು ಬಿಟ್ಟು ತಾನೇ ಆಗಾಗ ಹಳ್ಳಿಗೆ ಹೋಗಿ ಅಮ್ಮನನ್ನು ನೋಡಿ ಅವಶ್ಯವಾದ ಸೌಕರ್ಯಗಳನ್ನು ಒದಗಿಸಿ ಬರುತ್ತಿದ್ದ. ಅದನ್ನೂ ಶೀಲಾ ಸಹಿಸುತ್ತಿರಲಿಲ್ಲ. ಏನಾದರೊಂದು ರಾದ್ಧಾಂತ ಮಾಡುತ್ತಿದ್ದಳು. ಹಾಗಾಗಿ ಸುಳ್ಳು ಪಳ್ಳು ಹೇಳಿ, ಅವಳ ಕಣ್ಣು ತಪ್ಪಿಸಿ ಊರಿಗೆ ಹೋಗಿಬರುತ್ತಿದ್ದ. ತಾಯಿಯ ಸೂಕ್ಷ್ಮ ಹೃದಯ ಅವನ್ನೆಲ್ಲ ಅರಿತು, ಫೋನ್‌ನಲ್ಲಿ ಮಾತಾಡುವುದರಲ್ಲೇ ತೃಪ್ತಿಪಟ್ಟುಕೊಳ್ಳುತ್ತಿತ್ತು.

ಅಂದು ರಾತ್ರಿ ಅಮ್ಮನ ಫೋನು.

'ಅಮ್ಮ ಹೇಳು. ಚೆನ್ನಾಗಿದ್ದೀಯಾ?'

'ಶಶೀ, ಊಟ ಆಯ್ತಾಪ್ಪಾ?'

'ಆಯ್ತಮ್ಮ ಹೇಳು.'

'ತುಂಬ ಅವಸರದಲ್ಲಿದ್ದೀಯೇನಪ್ಪಾ? ಇರಲಿ ಬಿಡು ಆಮೇಲೆ ಮಾಡ್ತೀನಿ.'

'ಇಲ್ಲಮ್ಮ, ಹಾಗೇನೂ ಇಲ್ಲ. ಫ್ರೀಯಾಗೇ ಇದ್ದೀನಿ. ಹೇಳು.'

'ನೀನು ಚೆನ್ನಾಗಿದ್ದೀಯೇನಪ್ಪಾ?'

ಅಮ್ಮನ ದನಿ ಕೇಳುತ್ತಿದ್ದಂತೆ



ಗುರು ನಾವಳ್ಳಿ